
ಹೂದೋಟದ ಹುಡುಗಿಯರು.



ಪಳಕಳ ಸೀತಾರಾಮ ಭಟ್ಟ, ಮಿತ್ತಬೈಲ್, ದ. ಕ. ಬೆಲೆ: ೧೫ ನ. ಪೈ.

“ನನ್ನಿಂದಾಗದು” ಎಂದಳು ಸುಮತಿ.
“ನನ್ನಿಂದಾಗದು” ಎಂದಳು ಕಮಲೆ.
“ನನ್ನಿಂದಾಗದು” ಎಂದಳು ವಿಮಲೆ.

ಆಗ ವಸಂತಿ ಹೇಳಿದಳು—

“ಗೆಳತಿಯರೇ, ನೀವು ಹೂಗಿಡಗಳನ್ನು ನೆಡುವುದಿಲ್ಲವೇ? ಹಾಗೆಯೇ ಆಗಲಿ. ನಾನೇ ಅವುಗಳನ್ನು ನೆಡುತ್ತೇನೆ.”

ವಸಂತಿ ಪುಟ್ಟದೊಂದು ಹಾರೆಯನ್ನು ತೆಗೆದುಕೊಂಡಳು. ಹಾರೆಯಿಂದ ಮಣ್ಣನ್ನು ಅಗೆದಳು. ಚಿಕ್ಕ ವರಿಯನ್ನು ತಯಾರಿಸಿದಳು. ಆ ವರಿಯಲ್ಲಿ ಹೂಗಿಡಗಳನ್ನು ನೆಟ್ಟಳು.

ದಿನಗಳು ಕಳೆದುವು. ನೆಟ್ಟ ಗಿಡಗಳು ಚಿಗುರಿದುವು. ಚಿಗುರಿದ ಗಿಡಗಳು ಬೆಳೆಯತೊಡಗಿದುವು.

ಒಂದು ದಿನ ಗೆಳತಿಯರೆಲ್ಲ ಮತ್ತೊಮ್ಮೆ ಒಟ್ಟಾದರು. ಆಗ ವಸಂತಿಯು ಗೆಳತಿಯರನ್ನು ಕರೆದಳು. “ಗೆಳತಿಯರೇ, ಇದೋ ನೋಡಿರಿ!



ವಸಂತಿಯು ಕೆಲವು ಹೂಗಿಡಗಳನ್ನು ತಂದಳು.

ನೆಟ್ಟ ಗಿಡಗಳು ಜೀವ ಹಿಡಿದಿವೆ. ಈಗ ಅವುಗಳ ಬುಡಕ್ಕೆ ಗೊಬ್ಬರ ಹಾಕಬೇಕು. ಬೂದಿ ಹಾಕಬೇಕು. ಈ ಕೆಲಸವನ್ನು ಯಾರು ಮಾಡುತ್ತೀರಿ?" ಎಂದು ಕೇಳಿದಳು.

"ನನ್ನಿಂದಾಗದು" ಎಂದಳು ಸುಮತಿ.
"ನನ್ನಿಂದಾಗದು" ಎಂದಳು ಕಮಲೆ.
"ನನ್ನಿಂದಾಗದು" ಎಂದಳು ವಿಮಲೆ.

ಆಗ ವಸಂತಿ ಹೇಳಿದಳು—

"ಗೆಳತಿಯರೇ, ನೀವು ಹೂಗಿಡಗಳ ಆರೈಕೆ ನೋಡುವುದಿಲ್ಲವೇ? ಹಾಗೆಯೇ ಆಗಲಿ. ನಾನೇ ಆ ಕೆಲಸವನ್ನು ಮಾಡುತ್ತೇನೆ."

ವಸಂತಿ ಪುಟ್ಟದೊಂದು ಬುಟ್ಟಿಯನ್ನು ತೆಗೆದುಕೊಂಡಳು. ಬೂದಿಯನ್ನೂ ಗೊಬ್ಬರವನ್ನೂ ಅದರಲ್ಲಿ ತುಂಬಿಕೊಂಡಳು. ಹೂಗಿಡಗಳು ಇದ್ದಲ್ಲಿಗೆ ಬಂದಳು. ಗಿಡಗಳ ಬುಡಕ್ಕೆ ಬೂದಿಗೊಬ್ಬರಗಳನ್ನು ಹಾಕಿದಳು.

ಕೆಲವು ಸಮಯ ಕಳೆಯಿತು. ಮಳೆಗಾಲ ಹೋಯಿತು. ಬೇಸಗೆಯು ಬಂದಿತು. ಬಿಸಿಲಿನ ಉರಿ ಹೆಚ್ಚಿತು. ನೆಟ್ಟ ಹೂಗಿಡಗಳು ಬಾಡತೊಡಗಿದುವು. ಅವುಗಳಿಗೆ ನೀರು ಎರೆಯುವುದು ಅಗತ್ಯ ವೆನಿಸಿತು. ಆಗ ವಸಂತಿಯು ಗೆಳತಿಯರನ್ನು ಕರೆದಳು. ಅವರೊಡನೆ ಹೀಗೆ ಹೇಳಿದಳು—

"ಗೆಳತಿಯರೇ, ಮಳೆಗಾಲ ಹೋಗಿದೆ. ಬೇಸಗೆಯು ಬಂದಿದೆ. ಹೂಗಿಡಗಳು ಬಾಡತೊಡಗಿವೆ. ಅವುಗಳ ಬುಡಕ್ಕೆ ದಿನವೂ ನೀರನ್ನು ಎರೆಯಬೇಕು. ಈ ಕೆಲಸವನ್ನು ಯಾರು ಮಾಡುತ್ತೀರಿ?"

"ನನ್ನಿಂದಾಗದು" ಎಂದಳು ಸುಮತಿ.

"ನನ್ನಿಂದಾಗದು" ಎಂದಳು ಕಮಲೆ.

"ನನ್ನಿಂದಾಗದು" ಎಂದಳು ವಿಮಲೆ.

ಆಗ ವಸಂತಿ ಹೇಳಿದಳು—

"ಹೂಗಿಡಗಳಿಗೆ ನೀವು ನೀರು ಎರೆಯುವುದಿಲ್ಲವೇ? ಚಿಂತಿಲ್ಲ. ನಾನೇ ಆ ಕೆಲಸವನ್ನೂ ಮಾಡುತ್ತೇನೆ."



ವಸಂತಿಯು ಹೂಗಿಡಗಳಿಗೆ ನೀರೆರೆದಳು.

ವಸಂತಿಯು ಒಂದು ಚಿಕ್ಕ ಕೊಡವನ್ನು ತೆಗೆದುಕೊಂಡಳು. ಕೆರೆಗೆ ಹೋಗಿ ನೀರನ್ನು ತಂದಳು. ತಂದ ನೀರನ್ನು ಹೂಗಿಡಗಳಿಗೆ ಎರೆದಳು. ಅಂದಿನಿಂದ ಆಕೆ ತಪ್ಪದೆ ಆ ಕೆಲಸವನ್ನು ಮಾಡತೊಡಗಿದಳು.

ಕೆಲವು ದಿನಗಳು ಕಳೆದುವು. ಹೂಗಿಡಗಳು ಹುಲುಸಾಗಿ ಬೆಳೆದುವು. ಬೆಳೆದ ಗಿಡಗಳು ಹೂಬಿಟ್ಟುವು. ಎಂತಹ ಹೂಗಳವು! ಬಣ್ಣ ಬಣ್ಣದ ಹೂಗಳು! ಪರಿಮಳದ ಹೂಗಳು! ಅಂದಚಂದದ ಹೂಗಳು!

ಆ ದಿನ ಸುಮತಿಯು ವಸಂತಿಯ ಮನೆಗೆ ಬಂದಳು. ಕಮಲೆಯೂ ವಸಂತಿಯ ಮನೆಗೆ ಬಂದಳು. ವಿಮಲೆಯೂ ವಸಂತಿಯ ಮನೆಗೆ ಬಂದಳು. ಗೆಳತಿಯರೆಲ್ಲ ಅಲ್ಲಿ ಒಟ್ಟುಗೂಡಿದರು. ಆಗಲೇ ಅವರು ಹೂಗಿಡಗಳನ್ನು ನೋಡಿದರು. ಗಿಡಗಳಲ್ಲಿ ತುಂಬ ಹೂಗಳಿದ್ದುವು. ಅವುಗಳನ್ನು ನೋಡಿ ಗೆಳತಿಯರಿಗೆ ಸಂತೋಷವಾಯಿತು. ಹೂ ಮುಡಿಯಲು ಆಸೆಯಾಯಿತು.

ಸುಮತಿ ಕೇಳಿದಳು— "ವಸಂತೀ, ನನಗೆರಡು ಹೂ ಕೊಡಮ್ಮಾ."

ಕಮಲೆ ಕೇಳಿದಳು— "ವಸಂತೀ, ನನಗೆರಡು ಹೂ ಕೊಡಮ್ಮಾ."

ವಿಮಲೆ ಕೇಳಿದಳು— "ವಸಂತೀ, ನನಗೆರಡು ಹೂ ಕೊಡಮ್ಮಾ."

ಆಗ ವಸಂತಿ ಹೇಳಿದಳು— "ಗೆಳತಿಯರೇ, ನಿಮಗೀಗ ಹೂ ಬೇಕೇ ? ಅಂದು ನಿಮ್ಮೊಡನೆ ಹೂಗಿಡಗಳನ್ನು ನೆಡುತ್ತೀರಾ?'' ಎಂದೆ. "ನನ್ನಿಂದಾಗದು, ನನ್ನಿಂದಾಗದು'' ಎಂದಿರಿ. "ಹೂಗಿಡಗಳ ಬುಡಕ್ಕೆ ಗೊಬ್ಬರ ಹಾಕುವಿರಾ?" ಎಂದೆ. "ನನ್ನಿಂದಾಗದು, ನನ್ನಿಂದಾಗದು'' ಎಂದಿರಿ. ''ಹೂಗಿಡಗಳಿಗೆ ನೀರೆರೆಯುವಿರಾ" ಎಂದೆ. "ನನ್ನಿಂದಾಗದು, ನನ್ನಿಂದಾಗದು'' ಎಂದಿರಿ. ಆ ಎಲ್ಲಾ ಕೆಲಸಗಳನ್ನು ನಾನೇ ಮಾಡಿದೆ. ಈಗ ಹೂವನ್ನೂ ನಾನೇ ಮುಡಿಯುತ್ತೇನೆ. ಗಿಡಗಳನ್ನು ನೆಟ್ಟು ಬೆಳಸದವರಿಗೆ ಹೂ ಮುಡಿಯುವ ಆಸೆ ಏಕೆ?"

ಗೆಳತಿಯರು ವಸಂತಿಯ ಮಾತನ್ನು ಕೇಳಿದರು. ಅವರ ಮುಖಗಳು ಸಪ್ಪಗಾದುವು. ಅವರಿಗೆ ತಾವೂ ಹೂಗಿಡಗಳನ್ನು ನೆಡಬೇಕಿತ್ತು ಎಂದು ಅನಿಸಿತು.

ಆಗ ಸುಮತಿ ಹೇಳಿದಳು— ''ಗೆಳತೀ, ನನ್ನದು ತಪ್ಪಾಯಿತು. ಇನ್ನು ಮುಂದೆ ನಾನೂ ಹೂಗಿಡಗಳನ್ನು ನೆಡುತ್ತೇನೆ. ಅವುಗಳ ಆರೈಕೆ


ನೋಡುತ್ತೇನೆ. ಈ ಬಾರಿಗೆ ನೀನೇ ಒಂದೆರಡು ಹೂ ಕೊಡಮ್ಮಾ.''

ವಿಮಲೆ ಹೇಳಿದಳು— ''ಗೆಳತೀ, ನನ್ನದೂ ತಪ್ಪಾಯಿತು. ಇನ್ನು ಮುಂದೆ ನಾನೂ ಹೂಗಿಡಗಳನ್ನು ನೆಡುತ್ತೇನೆ. ಅವುಗಳ ಆರೈಕೆಯನ್ನು ನೋಡುತ್ತೇನೆ. ಈ ಬಾರಿಗೆ ನೀನೇ ಒಂದೆರಡು ಹೂ ಕೊಡಮ್ಮಾ."

ಕಮಲೆ ಹೇಳಿದಳು— ''ಗೆಳತೀ, ನನ್ನದೂ ತಪ್ಪಾಯಿತು. ಇನ್ನು ಮುಂದೆ ನಾನೂ ಹೂಗಿಡಗಳನ್ನು ನೆಡುತ್ತೇನೆ. ಅವುಗಳ ಆರೈಕೆಯನ್ನು ನೋಡುತ್ತೇನೆ. ಈ ಬಾರಿಗೆ ನೀನೇ ಒಂದೆರಡು ಹೂ ಕೊಡಮ್ಮಾ."

ವಸಂತಿ ಗೆಳತಿಯರ ಮಾತನ್ನು ಕೇಳಿದಳು. ಗಿಡಗಳಲ್ಲಿ ಅರಳಿದ್ದ ಕೆಲವು ಹೂಗಳನ್ನು ಕೊಯ್ದಳು. ಅವುಗಳನ್ನು ಸಮವಾಗಿ ನಾಲ್ಕು ಪಾಲು ಮಾಡಿದಳು. ಗೆಳತಿಯರೊಳಗೆ ಅವುಗಳನ್ನು ಹಂಚಿದಳು.

ಗೆಳತಿಯರು ಹೂಗಳನ್ನು ತೆಗೆದುಕೊಂಡರು. ಅವುಗಳನ್ನು ಕಟ್ಟಿ ಮಾಲೆ ಮಾಡಿದರು. ಮಾಡಿದ ಮಾಲೆಗಳನ್ನು ತುರುಬಿಗೆ ಮುಡಿದು ಕೊಂಡರು. ತುರುಬು ತುಂಬ ಹೂ ಮುಡಿದು ಸಂತೋಷಗೊಂಡರು.



ಬೆಳೆದ ಗಿಡಗಳು ಹೂಗಳನ್ನು ಬಿಟ್ಟುವು.

“ವಸಂತೀ, ನೀನು ಬಹಳ ಒಳ್ಳೆಯವಳಮ್ಮಾ” ಎಂದು ಗೆಳತಿಯನ್ನು ಕೊಂಡಾಡಿದರು.

ಈಗ ಸುಮತಿಯೂ ಚಿಕ್ಕದೊಂದು ಹೂದೋಟವನ್ನು ಮಾಡಿದ್ದಾಳೆ. ಕಮಲೆಯೂ ಚಿಕ್ಕದೊಂದು ಹೂದೋಟವನ್ನು ಮಾಡಿದ್ದಾಳೆ. ವಿಮಲೆಯೂ ಚಿಕ್ಕದೊಂದು ಹೂದೋಟವನ್ನು ಮಾಡಿದ್ದಾಳೆ. ವಸಂತಿ, ಸುಮತಿ, ಕಮಲೆ, ವಿಮಲೆ— ಎಲ್ಲರೂ ನಿತ್ಯ ಅವರವರ ತೋಟದ ಹೂಗಳನ್ನೇ ಮುಡಿದುಕೊಳ್ಳುತ್ತಾರೆ.




I.T.F

ಮುದ್ರಕರು:
ಶ್ರೀ ವಿವೇಕಾನಂದ ಪ್ರೆಸ್,
ಮೂಡುಬಿದ್ರಿ, ದ. ಕ.